| 1 | 2 | 3 | 4 | 5 | 6 |
|---|---|---|---|---|---|
| 22. | ಡಿ.ಎಸ್. ಅಬ್ದುಲ್ ರಹಮಾನ್ | 427 | 5–10–01 | 1–30 | – ಅದೇ – |
| 23. | ಹೆಚ್.ಜಿ. ಸುಧಾಕರ | 439 | 17–11–02 | 1–00 | ಬೆಂದರಗೋಡು |
| | | 448 | | | |
| ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾ. | | | ಸಾಮಾನ್ಯ ಮರಳು :– | | |
| 1. | ಎಂ.ಆರ್. ಜಯಂತ್ | 298 | 28–6–99 | 6–00 | ಮಹಿಷಿ |
| 2. | ಎಂ.ಸಿ. ನಾಗೇಶ್ | 299 | 28–6–99 | 4–00 | ಮಹಿಷಿ |
| 3. | ಎಂ.ಸಿ. ದಿನೇಶ್ | 308 | 16–9–99 | 1–20 | ಲಿಂಗಾಪುರ |
| 4. | ಹೆಚ್.ಆರ್. ಪ್ರಕಾಶ್ (ನವೀಕರಣ) | 312 | 4–10–00 | 4–00 | ಲಿಂಗಾಪುರ |
| 5. | ಎಂ.ಸಿ. ದಿನೇಶ್ | 319 | 3–11–99 | 1–00 | ಲಿಂಗಾಪುರ |
| 6. | – ಅದೇ – | 320 | – ಅದೇ – | 1–00 | ಲಿಂಗಾಪುರ |

**ಪಶು ಚಿಕಿತ್ಸಾ ಆಸ್ಪತ್ರೆಯ ಸೇವಾ ಶುಲ್ಕ ಕುರಿತು**

4161 (4593) : ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಶುಚಿಕಿತ್ಸಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರತಕ್ಕಂತಹ ಸಣ್ಣ ಮತ್ತು ದೊಡ್ಡ ಪ್ರಾಣಿಗಳಿಗೆ ಎಷ್ಟು ಸೇವಾ ಶುಲ್ಕ ನಿಗದಿಪಡಿಸಲಾಗಿದೆ:

ಆ) ಪಶುಗಳ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಎಷ್ಟು ಶುಲ್ಕವನ್ನು ನಿಗದಿಪಡಿಸಲಾಗಿದೆ: ವಿವರ ನೀಡುವುದು.

ಇ) ಒಳರೋಗಿ ಚಿಕಿತ್ಸೆ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಕೊಡಲು ಕಷ್ಟವಾಗುವುದೆಂದು ಬಂದ ಸಾರ್ವಜನಿಕರು ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಸರಿಯಾಗಿ ಪಶುಚಿಕಿತ್ಸಾಲಯಗಳಿಗೆ ಔಷಧಿಗಳು ಸರಬರಾಜಿಲ್ಲದೆ ಸಾರ್ವಜನಿಕ ಪಶುಗಳಿಗೆ ತೊಂದರೆಯಾಗುತ್ತಿರುವುದು ನಿಜವೇ:

ಉ) ಈ ರೀತಿ ಶುಲ್ಕ ವಸೂಲು ಮಾಡುವುದನ್ನು ತಪ್ಪಿಸಲು ಸರ್ಕಾರವು ಏನಾದರೂ ಕಾರ್ಯಕ್ರಮ ಕೈಗೆದುಕೊಳ್ಳುವುದೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ನಿಗದಿಪಡಿಸಲಾಗಿದ್ದ ಸೇವಾ ಶುಲ್ಕವನ್ನು ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 57 ಪಪಾಯೋ 2003 ದಿನಾಂಕ: 21–7–2003ರಲ್ಲಿ ಹಿಂತೆಗೆದುಕೊಳ್ಳಲಾಗಿದೆ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಸರ್ಕಾರ ಲಭ್ಯವಿರುವ ವಂಟನಕ್ಕೆ ಒಳಪಟ್ಟು ಔಷಧಿಗಳನ್ನು ಸರಬರಾಜು ಮಾಡುತ್ತಿದೆ.

ಉ) ಮೇಲೆ ತಿಳಿಸಿರುವಂತೆ ಸೇವಾಶುಲ್ಕ ಹಿಂತೆಗೆದುಕೊಳ್ಳಲಾಗಿದೆ.

**ಉಡುಪಿ ಜಿಲ್ಲೆಯಲ್ಲಿ ಮಂಜೂರಾದ ಪಾಲಿಕ್ಲಿನಿಕ್‌ಗಳು**

4162 (4777) : ಶ್ರೀ ಗೋಪಾಲ ಬಂಡಾರಿ .ಹೆಚ್ (ಕಾರ್ಕಳ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?